**ಕರ್ನಾಟಕ ಸರ್ಕಾರದ ನಡವಳಿಗಳು**

ವಿಷಯ:- ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರುಗಳಿಗೆ ಉನ್ನತ ವ್ಯಾಸಂಗಕ್ಕೆ ಅನುಮತಿ ನೀಡುವ ಬಗ್ಗೆ.

ಓದಲಾಗಿದೆ:- ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಪತ್ರ ಸಂಖ್ಯೆ: ಸಿ3(4)ಉ.ವ್ಯಾ.ಅನು1/2010-11 ದಿನಾಂಕ: 28-04-2010.

* * * * *

**ಪ್ರಸ್ತಾವನೆ:** –

1. ಮೇಲೆ ಓದಲಾದ ಪತ್ರದಲ್ಲಿ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರು ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಪ್ರಾಥಮಿಕ ಶಾಲಾ ಶಿಕ್ಷಕರು ವಿಶೇಷವಾಗಿ ವಿಜ್ಞಾನ, ಗಣಿತ ಆಂಗ್ಲ ಭಾಷಾ ಶಿಕ್ಷಕರ ಶೈಕ್ಷಣಿಕ ಗುಣಮಟ್ಟವನ್ನು ಹೆಚ್ಚಿಸುವ ಸಲುವಾಗಿ ಅವರನ್ನು ಉನ್ನತ ವ್ಯಾಸಂಗಕ್ಕೆ ನಿಯೋಜಿಸುವುದು ಸೂಕ್ತ ಹಾಗೂ ಇದರಿಂದ ಶಿಕ್ಷಕರಲ್ಲಿ ಕಾರ್ಯಕ್ಷಮತೆ ಹಾಗೂ ವಿಷಯ ಜ್ಞಾನ ವೃದ್ಧಿಯಾಗಲು ಉನ್ನತ ವ್ಯಾಸಂಗಕ್ಕೆ ನಿಯೋಜಿಸುವಾಗ ಮಂಜೂರಾಗಿರುವ ಒಟ್ಟು ವೃಂದ ಬಲದ ಶೇ.5ರಷ್ಟು ಶಿಕ್ಷಕರನ್ನು ನಿಯೋಜಿಸುವುದು ಅಪೇಕ್ಷಣೀಯ. ಆದ್ದರಿಂದ ಸದರಿ ಶಿಕ್ಷಕರಿಗೆ ಉನ್ನತ ವ್ಯಾಸಂಗಕ್ಕೆ ನಿಯೋಜಿಸಲು ಅನುಮತಿಯನ್ನು ಕೋರಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

2. ಸದರಿ ಪ್ರಸ್ತಾವನೆ ಬಗ್ಗೆ ಸರ್ಕಾರದ ಮಟ್ಟದಲ್ಲಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ಇಡಿ: 135 ಯೋಯೋಕ 2010 ಬೆಂಗಳೂರು, ದಿನಾಂಕ: 02-07-2010**
**[ಇಡಿ: 79 : ಸ್ಟೀಮರ(ಯುನಿಕ್) 2010, ದಿನಾಂಕ: 02-07-2010]**

3. 2010-11ನೇ ಸಾಲಿನಿಂದ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಪ್ರಾಥಮಿಕ ಶಾಲಾ ಶಿಕ್ಷಕರು ವಿಶೇಷವಾಗಿ ವಿಜ್ಞಾನ, ಗಣಿತ ಆಂಗ್ಲ ಭಾಷಾ ಶಿಕ್ಷಕರ ಶೈಕ್ಷಣಿಕ ಗುಣಮಟ್ಟವನ್ನು ಹೆಚ್ಚಿಸುವ ಸಲುವಾಗಿ ಅವರನ್ನು ಉನ್ನತ ವ್ಯಾಸಂಗಕ್ಕೆ

ನಿಯೋಜಿಸಲು ಈ ಕೆಳಕಂಡ ಷರತ್ತಿಗೊಳಪಟ್ಟು ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ಅನುಮತಿ ನೀಡಲಾಗಿದೆ.

**ಷರತ್ತುಗಳು :**

- ನೇಮಕಗೊಂಡ ಶಿಕ್ಷಕರು ಖಾಯಂಪೂರ್ವ ಸೇವಾವಧಿ ಮುಗಿಸಿ ಕನಿಷ್ಠ 05 ವರ್ಷ ಸೇವೆ ಸಲ್ಲಿಸಿರಬೇಕು.

- ವಿಜ್ಞಾನ ಶಿಕ್ಷಕರಾಗಿದ್ದಲ್ಲಿ ಬಿಎಸ್ಸಿ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ನಿಯೋಜಿಸಬಹುದು.

- ಆಂಗ್ಲ ವಿಷಯಗಳನ್ನು ಒಳಗೊಂಡ ಬಿ.ಎ. ಪದವಿಗಾಗಿ ಪಿಯುಸಿಯಲ್ಲಿ ಆಂಗ್ಲ ಮಾಧ್ಯಮದಲ್ಲಿ ಅಭ್ಯಾಸ ಮಾಡಿರಬೇಕು ಅಥವಾ ಪ್ರಥಮ ಭಾಷೆ ಆಂಗ್ಲ ಭಾಷೆಯಾಗಿರಬೇಕು ಅಥವಾ ದ್ವಿತೀಯ ಭಾಷೆಯಲ್ಲಿ ಶೇ. 60 ಅಂಕ ಗಳಿಸಿರಬೇಕು

- ಪದವಿಯನ್ನು ಪೂರೈಸಿದ ನಂತರ ಕನಿಷ್ಟ 10 ವರ್ಷ ಶಿಕ್ಷಣ ಇಲಾಖೆಯಲ್ಲಿಯೇ ಕಾರ್ಯನಿರ್ವಹಿಸುವುದಾಗಿ ಬಾಂಡ್ ಪೇಪರ್ ರೂ. 10-00ನಲ್ಲಿ ಸಮ್ಮತಿ ಸೂಚಿಸಿ ಒಪ್ಪಿಗೆ ನೀಡಬೇಕು. .

- ಇಲಾಖೆಯ ಸಹಕಾರವಿಲ್ಲದೆಯೇ ಪದವಿ ಕಾಲೇಜುಗಳಲ್ಲಿ ಪ್ರವೇಶಾವಕಾಶವನ್ನು ಪಡೆದುಕೊಳ್ಳಬೇಕು. ಆರಂಭದಲ್ಲಿ ಪ್ರಾಥಮಿಕ ಶಿಕ್ಷಕರನ್ನು ಉನ್ನತ ವ್ಯಾಸಂಗಕ್ಕೆ ನಿಯೋಜಿಸುವಾಗ 750 ವಿಜ್ಞಾನ ಶಿಕ್ಷಕರಿಗೆ (ಪಿಸಿಎಂ ಮತ್ತು ಸಿಬಿಝಡ್) ಸೇರಿ ಮತ್ತು 250 (ಕಲಾ ಮತ್ತು ಆಂಗ್ಲ) ಪದವಿಗೆ ನಿಯೋಜಿಸಬಹುದು.

- ಈ ತರಬೇತಿ ಅವಧಿಯಲ್ಲಿ ಯಾವುದೇ ತೆರನಾದ ರಜೆಗೆ ಅವಕಾಶವಿರುವುದಿಲ್ಲ. (ಆಕಸ್ಮಿಕ ರಜೆ ಮತ್ತು ಬೇಸಿಗೆ ರಜೆ ಹೊರತುಪಡಿಸಿ).

- ಜ್ಞಾನದಾಹಿ ಶಿಕ್ಷಕರಿಗೆ ಮಾತ್ರ ಉನ್ನತ ವ್ಯಾಸಂಗ ತರಬೇತಿಗೆ ಆಯ್ಕೆ ಮಾಡಲಾಗುವುದು.

- ಉನ್ನತ ವ್ಯಾಸಂಗದ ಅವಧಿಯಲ್ಲಿ ಅವ ಹುದ್ದೆ ಅಲ್ಲಿಯೇ ಖಾಲಿಯಿರುವುದಿಲ್ಲ.

- ವ್ಯಾಸಂಗದ ನಂತರ ಪುನ: ಅದೇ ಶಾಲೆಗೆ ಹಾಜರಾಗುವುದು.

- ವ್ಯಾಸಂಗದ ಅವಧಿಯಲ್ಲಿ ಶಿಕ್ಷಕರು ಪಡೆಯುತ್ತಿರುವ ಸಂಬಳ ನೀಡಲಾಗುವುದು.

- ವ್ಯಾಸಂಗಕ್ಕಾಗಿ ತಗಲುವ ನೈಜ ವೆಚ್ಚ ಹಾಗೂ ಪರೀಕ್ಷಾ ಶುಲ್ಕ ಸರ್ಕಾರ ಭರಿಸಬೇಕಾಗುತ್ತದೆ.

- ಉನ್ನತ ವ್ಯಾಸಂಗಕ್ಕೆ ನಿಯೋಜಿತನಾಗುವ ನೌಕರರು 45 ವರ್ಷಗಳ ವಯೋ ಮಿತಿಯನ್ನು ಮೀರಿರಬಾರದು.

- ವ್ಯಾಸಂಗಕ್ಕೆ ಆಯ್ಕೆಯಾದ ಶಿಕ್ಷಕರು ಜೇಷ್ಠತೆಯ ಆಧಾರದ ಮೇಲೆ ನಿಯೋಜಿಸುವಂತಿರಬೇಕು.

- ನಿಯೋಜನೆಯ ಸಂಪೂರ್ಣ ಸೇವಾವಧಿಯಲ್ಲಿ ಒಂದು ಬಾರಿಗೆ ಮಾತ್ರ ಸೀಮಿತವಾಗಿರತಕ್ಕದ್ದು.

- ನಿಯೋಜನೆಯು ಒಟ್ಟಾರೆ ವೃಂದಬಲದ ಶೇ. 5ನ್ನು ಮೀರಬಾರದು.

- ವ್ಯಾಸಂಗಕ್ಕೆ ನಿಯೋಜಿತನಾದ ಅಭ್ಯರ್ಥಿಗೆ 1/2 ದಿನಭತ್ಯೆ ಅಥವಾ ರೂ. 2,000/-ಗಳಲ್ಲಿ ಯಾವುದು ಕಡಿಮೆಯೋ ಅದನ್ನು ನೀಡತಕ್ಕದ್ದು. ವೇತನ ಸಹಿತ ನಿಯೋಜಿಸುವುರಿಂದ ನಿಗದಿತ ಫೀಯನ್ನು ಮಾತ್ರ ಸಂದಾಯ ಮಾಡ ಬಹುದು.

- ನಿಗದಿತ ಅವಧಿಯಲ್ಲಿ ವ್ಯಾಸಂಗವನ್ನು ಪೂರ್ಣಗೊಳಿಸದಿದ್ದಲ್ಲಿ ಒಂದು ವರ್ಷದ ವಿಸ್ತರಣಾವಧಿಯನ್ನು ನೌಕರರ ಹಕ್ಕಿನಲ್ಲಿರುವ ರಜೆಯೊಂದಿಗೆ ಪೂರೈಸಲು ಅವಕಾಶಗಳನ್ನು ನೀಡುವುದು.

- ನಿಯೋಜಿತ ಅಭ್ಯರ್ಥಿಯು ವ್ಯಾಸಂಗವನ್ನು ಪೂರೈಸದಿದ್ದಲ್ಲಿ ವ್ಯಾಸಂಗದ ಅವಧಿಯ ವೇತನ ಭತ್ಯೆಗಳನ್ನು ಸಂಪೂರ್ಣವಾಗಿ ವಸೂಲು ಮಾಡಲು ಈ ಸಂಬಂಧ ಅಭ್ಯರ್ಥಿಯಿಂದ ಫಾರಂ ಸಂಖ್ಯೆ-19ರಲ್ಲಿ ಕರಾರು ಪತ್ರವನ್ನು ಪಡೆಯತಕ್ಕದ್ದು.

❖ ನಿಯೋಜಿತ ಅಭ್ಯರ್ಥಿಯು ವ್ಯಾಸಂಗದ ಪ್ರವೇಶಕ್ಕಾಗಿ ತೆರಳುವ ಮೊದಲ ಬಾರಿಯ ಹಾಗೂ ವ್ಯಾಸಂಗ ಪೂರೈಸಿ ಕೇಂದ್ರ ಸ್ಥಾನಕ್ಕೆ ಹಿಂತಿರುಗುವ ಪ್ರಯಾಣಗಳಿಗೆ ಮಾತ್ರ ಅರ್ಹ ದಿನಭತ್ಯೆ ಮತ್ತು ಪ್ರಯಾಣ ಭತ್ಯೆಗಳನ್ನು ಪಡೆಯತಕ್ಕದ್ದು.

4. ಸದರಿ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ ಆಇ 345 ವೆಚ್ಚ.8 2010, ದಿನಾಂಕ : 02/06/2010 ಮತ್ತು ಯೋಜನಾ ಇಲಾಖೆ ಟಿಪ್ಪಣಿ ಸಂಖ್ಯೆ : ಯೋಇ/50/ ಜಶ/2010, ದಿನಾಂಕ:13/05/2010ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಐ.ಎಫ್. ಮಾಗಿ)
ವಿಶೇಷಾಧಿಕಾರಿ ಮತ್ತು ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ
ಶಿಕ್ಷಣ ಇಲಾಖೆ(ಯೋಜನೆ).

ಸಂಖ್ಯೆ: ಸಿ3(4)ಪ್ರಾ.ಶಿ ಉ.ವ್ಯಾ.ಅನು1/2010-2011 ದಿ. 16-08-2010

ಸರ್ಕಾರಿ ಆದೇಶ ಸಂಖ್ಯೆ: ಇಡಿ: 135 ಯೋಯೋಕೆ 2010 ದಿನಾಂಕ 02.07.2010 [ಇಡಿ: 79 ಸ್ಪೀಮರ್ (ಯುನಿಕ್) 2010, ದಿನಾಂಕ 02-07-2010 ರ ಆದೇಶದ ಯಥಾ ಪ್ರತಿಯನ್ನು ಈ ಪತ್ರಕ್ಕೆ ಲಗತ್ತಿಸಿದೆ. ಸದರಿ ಆದೇಶದಲ್ಲಿ ತಿಳಿಸಿರುವಂತೆ ಉನ್ನತ ವ್ಯಾಸಂಗ ಮಾಡಲು ಇಚ್ಛಿಸಲಿರುವ ಪ್ರಾಥಮಿಕ ಶಾಲಾ ಶಿಕ್ಷಕರ ಜೇಷ್ಠತಾ ಪಟ್ಟಿಯನ್ನು ಈ ಕಛೇರಿಗೆ ದಿನಾಂಕ 31-08-2010 ರ ಒಳಗೆ ಸಲ್ಲಿಸಲು ತಿಳಿಸಿದೆ.

ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ

ಇವರಿಗೆ:
ರಾಜ್ಯದ ಎಲ್ಲಾ ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ,